ಇಸ್ತಿಹಾರ್‌ನಾಮೆ.

ಮೈಸೂರು ಫಾರೆಸ್ಟ್ ಇಲಾಖಾ.

ತಾರೀಖು 13ನೇ ಫಿಬ್ರವರಿ 1895.

ಸನ 1878ನೇ ಇಸವಿ ಫಾರೆಸ್ಟ್ ರೂಲ್‌ಸ್ 9ನೇ ಸೆಕ್ಷನ್ ಅನುಸರಿಸಿ ಮೈಸೂರು ಡಿಸ್ಟ್ರಿಕ್ಟು ಫೈಂಜ್‌ರಾಕ್ಸ್ ಸಬ್ ಡಿವಿಜನ್ ಹೊಸದಾಗಿ ಡಿಮಾರ್ಕೇಟ್ ಮಾಡಲ್ಪಟ್ಟ ನಾರಾಯಣದುರ್ಗ ಸ್ಟೇಟ್ ಫಾರೆಸ್ಟ್ ಸರಹದ್ದುಗಳು ಸಕಲರಿಗೂ ತಿಳಿಯುವ ಬಗ್ಯೆ ಘೋಷಿಸ್ ಮಾಡಲ್ಪಟ್ಟಿದೆ.

ವಿಸ್ತೀರ್ಣ—10046 ಎಕರೆಗಳು ಅಥವಾ 15·7 ಚದರ ಮೈಲಿಗಳು ಇದರಗಡಿ ಸರಹದ್ದುಗಳು

ಪಶ್ಚಿಮಕ್ಕೆ—66 ಅಡಿ ಅಗಲ ಪಾಕ್ ಮಾಡಲ್ಪಟ್ಟ ಲೈನು. ಮಾರ್ಬಳ್ಳಿ ಸಿಂಗಾಪುರ ಮತ್ತು ಚಟಮ್ಮಗಿರಿ ಹಳ್ಳಿಗಳ ಸರಹದ್ದು ಬಾಂದುಗಳಿಂದ ಹೊರಟು ಚಟಿಂಗೇರಿ ಸರ್ವೆ ನಂಬರು 78 ಹೆಮ್ಮಡಹಳ್ಳಿ ಬಾಬತು 59 ಮತ್ತು 41 ಸಿಂಗಾಪುರ ಬಾಬತು 12 ವಸಂತಪುರದ 18 ಮತ್ತು 17 ಮಾದಿಗರ ಹೊಸಹಳ್ಳಿ ಬಾಬತು 14 ಜಾಮಲಾಪುರದ 51 ಮತ್ತು 50 ಶಿಂಧಘಟ್ಟದ ಬಾಬತು 173 ಜಾಗನಕೇರೆ ಬಾಬತು 99 ಮತ್ತು ಕೊಟ್ಟಗೆಹಳ್ಳಿ ಬಾಬತು 35ನೇ ನಂಬರ್‌ಗಳ ಮಧ್ಯೆ ಹೊರಟು ಕೃಷ್ಣರಾಜಪ್ಯಾಟೆ ತಾಲ್ಲೂಕು ದುಗ್ಗನಹಳ್ಳಿ ಮತ್ತು ಬೊಪ್ಪನಹಳ್ಳಗಳ ಗಡಿ ಬಾಂದುಗಳಿಗೆ ಕೇರುತ್ತೆ.

ಉತ್ತರ—ಡಿಟೋ ಮೇಲೆ ಹೇಳಲ್ಪಟ್ಟ ಗಡಿ ಬಾಂದುಗಳಿಂದ ಹೊರಟು ಕೃಷ್ಣರಾಜಪ್ಯಾಟೆ ತಾಲ್ಲೂಕು ಬೊಪ್ಪನಹಳ್ಳಿಯ ಸರ್ವೆ ನಂಬರು 63—64 ನಾಗಮಂಗಲ ತಾಲ್ಲೂಕು ಕೊರವಿನಗುಂಡಿಯ 68—59 ಹಿಂಡ್ಸಹಳ್ಳಿದು 40—41 ಮತ್ತು 31 ಮಾದಿಹಳ್ಳಿ ಬಾಬತು 16 ಬೊಗಾದಿ ಬಾಬತು 36ನೇ ಸರ್ವೆ ನಂಬರುಗಳ ಮಧ್ಯೆ ಹೋಗುತ್ತೆ.

ಪೂರ್ವ—ಡಿಟೋ ಬೊಗಾದಿ ಸರ್ವೆ ನಂಬರು 36 ಬಿಟ್ಟ ನಂತರ ಗುಜ್ಜಗೋನಹಳ್ಳಿ ಬಾಬತು ಸರ್ವೆ ನಂಬರು 4 ಸಿಂಗಾಪುರದ 12 ಪಗಡೆಕಲ್ಲಹಳ್ಳಿ ಬಾಬತು 33ರ ಮಧ್ಯೆ ಹೋಗಿ ಜೋಡಿ ರಾಂಪುರದ ಜಂಗಲ್ ಅಡ್ಡಲಾಗಿ ಹೋಗಿ ಅಲ್ಲಿಂದ ಕೊಡಗಹಳ್ಳಿ ಸರ್ವೆ ನಂಬರು 4 ನಾರಣಪುರದ ಸರ್ವೆ ನಂಬರು 29—12 ಮತ್ತು ಶ್ರೀರಂಗಪಟ್ಟಣ ತಾಲ್ಲೂಕು ಮಾದೇನಹಳ್ಳಿ ಸರ್ವೆ 28ನೇ ನಂಬರು ಮಧ್ಯೆ ಹೋಗಿ ಶಿದ್ದಪ್ಪನಕಟ್ಟೆ ಬಾಂದು ಯಂದು ಹೆಸರುವುಳ್ಳ ಮಾದೇನಹಳ್ಳಿ ಮೇಲ್‌ಕೋಟೆ ಮತ್ತು ಹುಲಿಗೆರೆ ಗಡಿ ಬಾಂದುಗಳಿಗೆ ಕೇರುತ್ತೆ.

ದಕ್ಷಿಣ—ಡಿಟೋ ಮೇಲೆ ಹೇಳಿರುವ ಸ್ಥಳದಿಂದ ಹೊರಟು ಹುಲಿಗೆರೆ ಸರ್ವೆ ನಂಬರು 1 ಮತ್ತು ಕೃಷ್ಣರಾಜಪ್ಯಾಟೆ ತಾಲ್ಲೂಕು ಸಿಂಗಾಪುರದ 15—14ನೇ ನಂಬರು ಮಧ್ಯೆ ಹೋಗಿ ಮೂರು ಸ್ಥಳವಾದ ಮಾರ್ಬಳ್ಳಿ ಸಿಂಗಾಪುರ ಚಟಿಂಗೆರೆ ಗಡಿ ಬಾಂದಿಗೆ ಕೇರುತ್ತೆ.

ಯಲ್. ರಿಕ್ಕೆಟ್ಸ್,
ಇನ್‌ಸ್ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.

ಬೆಂಗಳೂರು ಡಿಸ್ಟ್ರಿಕ್ಟು.

ಇಸ್ತಿಹಾರ್‌ನಾಮೆ.

ತಾರೀಖು 23ನೇ ಜನವರಿ 1895.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ,—ಮೈನರ್ ಫಾರೆಸ್ಟ್ಯಖಾನೆ ಚಿಲ್ಲರೆ ಪಸಾರೆ ಮತ್ತು ಮರವಳಿ ಫಸಲಿನ ಹರಾಜು ವಿಷಯದಲ್ಲಿ ಸಾದರ ಮಾಡಲ್ಪಟ್ಟಿರುವ 1892ನೇ ಇಸವಿ ಜೂನ್ 2ನೇ ಮರಳುಂ ಮೈಸೂರ್ ಗೆಜೆಟ್ಟಿನ 2ನೇ ಭಾಗದಲ್ಲಿ ಘೋಷಿಸಾಗಿರುವ ಅದೇ ಇಸವಿ ಮೇ 11ನೇ ಮರ್ಕುಂ ಇಸ್ತಿಹಾರನ್ನು ಬದಲಾಯಿಸಿ ಅಮಲ್‌ದಾರ್ ಮತ್ತು ಸವಾಲ್‌ದಾರ್‌ಗಳ ನಡವಳಿಕೆ ಬಗ್ಯೆ ಈ ಕೆಳಗೆ ನಮೂದಾಗುವ ತಾಜಾ ಇಸ್ತಿಹಾರ್ ಪ್ರಕಟಿಸಲ್ಪಟ್ಟಿರುತ್ತೆ.

(1) ಕಾರ್ತಿಕ ಮತ್ತು ವೈಶಾಖಿ ಫಸಲ್‌ಗಳು ಬೇರೆ ಬೇರೆ ಯರಡು ಕಾಲಗಳಲ್ಲಿ ಹರಾಜು ಮಾಡಲ್ಪಡುತ್ತವೆ.

(2) ತಾಲ್ಲೂಕು ಅಮಲ್‌ದಾರ್ರು ತಪ್ಪದೆ ತಾವೇನೇ ಆಯಾಯ ಹೋಬಳಿ ಕಸಬೆಯಲ್ಲಿ ಆಯಾಯ ಹೋಬಳಿ ಫಸಲನ್ನು ಹರಾಜು ಮಾಡುವರು. ಕಾರ್ತಿಕ ಫಸಲನ್ನು ಡಿಸೆಂಬರ್ ತಿಂಗಳಲ್ಲಿಯೂ ವೈಶಾಖಿ ಫಸಲನ್ನು ಮೇ ತಿಂಗಳಲ್ಲಿಯೂ ಅನುಕೂಲವಾದ ತಾರೀಖುಗಳಲ್ಲಿ ಹರಾಜು ಮಾಡಲಾಗುವದು. ಆ ತಾರೀಖುಗಳನ್ನು ಅಮಲ್‌ದಾರ್ರು ಪ್ರಕಟಿಸುತ್ತಾರೆ.

(3) ಹರಾಜು ಷರತ್ತುಗಳೇನಂದರೆ.

(a) ಹರಾಜು ಪೂರೈಸಿದನಂತರ ಬರುವ ದರಖಾಸ್ತುಗಳನ್ನು ಮಂಜೂರ್ ಮಾಡುವದಿಲ್ಲ.

(b) ಆಖ್ಯರ್ ಚಡಸವಾಲ್ ಡೆಪ್ಯುಟಿ ಕಮ್ಮಿಷನರ್ ಸಾಹೆಬರವರಿಂದ ಮಂಜೂರಾಗುವ ವರಿಗೂ ಕಾಯಂ ಆದದ್ದಾಗಿ ತಿಳಿಯಕೂಡದು.

(c) ಹರಾಜು ಕಾಲದಲ್ಲಿ ಸವಾಲ್ ಮಾಡುವರು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೊ ಅಥವಾ ಇತರರ ವಿಜಂಟಿರಾಗಿ ಸವಾಲ್ ಮಾಡುತ್ತಾರೋ ಕೇಳಲ್ಪಡಬಹುದು. ಆ ಸಂದರ್ಭದಲ್ಲಿ ಯಾರಿಗೋಸ್ಕರ ಸವಾಲ್ ಮಾಡುತ್ತಾರೋ ಅವರಿಂದ ರುಜು ಹಾಕಲ್ಪಟ್ಟ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡಬೇಕು, ಹಾಗಿಲ್ಲವಾದರೆ ಅವರ ಸವಾಲ್ ತಿರಸ್ಕರಿಸಲ್ಪಡಬಹುದು.

(d) ಚಡಸವಾಲ್‌ದಾರನು ಹರಾಜು ಕಾಲದಲ್ಲಿ ತನ್ನ ಸವಾಲ್ ಅಂಗೀಕರಿಸಲ್ಪಟ್ಟ ಕೂಡ್ಲೆ ಸವಾಲ್ ಮೊಬಲಗು ಪೈಕಿ ಕೇಕಡಾ 25 ರೂಪಾಯಿಗಳ ಮೇರೆ ಡಿಪಾಜಿಟ್ಟನ್ನು ಹಾಜರ್ಮಾಡಬೇಕು. ಬಾಕಿ ಮೊಬಲಗನ್ನು ಮತ್ತು ರೂಪಾಯಿ 1ಕ್ಕೆ ಒಂದಾಣೆ ಮೇರೆಗೆ ಆಗುವ ಲೋಕಲ್ ಸಸ್ಸನ್ನು ಸಹ ಹರಾಜು ಕಾಯಂ ಆದ ಸಂಗತಿ ಬರಹ ಮೂಲಕ ಅಮಲ್‌ದಾರಿಂದ ತಿಳಿಗಲ್ಪಟ್ಟ 7 ದಿನಗಳೊಳಗಾಗಿ ಪಾವತಿ ಮಾಡಬೇಕು. ಡಿಪಾಜಿಟಿನ್ನು ಕಟ್ಟುವದಕ್ಕೂ ಅಥವಾ ಬಾಕಿ ಮೊಬಲಗನ್ನು ಕ್ರಮವಾಗಿ ಪಾವತಿ ಮಾಡುವದಕ್ಕೂ ತಪ್ಪಿದರೆ ಕೂಡ್ಲೆ ಪುನಹ ಹರಾಜು ಮಾಡಿ ಅದರಿಂದ ಉಂಟಾಗುವ ನಷ್ಟಕ್ಕೆ ಮೊದಲು ಸವಾಲ್‌ದಾರನನ್ನು ಗುರಿಮಾಡುವದು.

(e) ಅಂಗೀಕರಿಸಲ್ಪಟ್ಟ ಸವಾಲ್‌ದಾರನು ವೈಶಾಖಿ ಫಸಲನ್ನು ಜೂನ್ 1ನೇ ತಾರೀಖು ಲಾಗಾಯತು ಡಿಸೆಂಬರ್ 31ರ ವರಿಗೂ, ಕಾರ್ತಿಕ ಫಸಲನ್ನು ಜನವರಿ 1ನೇ ತಾರೀಖು ಮೇ 31ರ ವರಿಗೂ ರೂಢಿಸಿಕೊಳ್ಳಲು ಹಕ್ಕುಳ್ಳವನಾಗಿರುತ್ತಾನೆ.

ಎ. ನರಸಿಂಹಯ್ಯಂಗಾರ್, ಫಾರ್ ಡೆಪ್ಯುಟಿ ಕಮ್ಮಿಷನರ್.